ಶ್ವೇತಾಲಕ್ಷ್ಮಿ ಅಮ್ಮೆ, ಬೆಂಗಳೂರು
*ಶಾದೀಭಾಗ್ಯಕ್ಕೆ ನೀಡುವ ಹಣವನ್ನು ವಿದ್ಯಾಭಾಗ್ಯಕ್ಕೆ ನೀಡಿದ್ದರೆ ಚೆನ್ನಾಗಿತ್ತಲ್ಲವೆ?*




ಊಹೂಂ. ಶಾದಿಯಿಂದ ಕುಟುಂಬಗಳು ಬೆಳೆದು ಮತದಾರರು ಹೆಚ್ಚುತ್ತಾರೆ. ವಿದ್ಯಾವಂತರು ಇವರಿಗೆ ಓಟ್ ಹಾಕುವುದಿಲ್ಲವಲ್ಲ!

ವೆಂಕಟೇಶ ಇಂಗಳಗಿ, ರಾಮದುರ್ಗ
*ಇಲ್ಲೊಬ್ಬಳು ಹಿಟ್ಲರ್‌ನಂತಹ ಹೆಂಡತಿ ಗಂಡನನ್ನು ಹಿಂಸಿಸಿ ಆತನನ್ನು ಜೀವಂತ ಹೆಣ ಮಾಡಿಬಿಟ್ಟಿದ್ದಾಳಲ್ಲಾ...?*
ನರ್ಸಿಂಗ್‌ಹೋಂನವನ ಮಗಳಿರಬೇಕು; ಬೇರೆ ಪೇಷೆಂಟ್ಸ್ ಇಲ್ಲದಾಗ ಒಂದು ಇರಲೆಂದು ಈ ಪ್ಲ್ಯಾನು!

ಕೆ. ಮೈಥಿಲಿಕೃಷ್ಣ, ಬೆಂಗಳೂರು
*ಮನೆಗಿಂತ ಮಜಾ ಜೀವನ ಎಲ್ಲಿ ಸಾಧ್ಯ?*
ಸದನದಲ್ಲಿ!

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ
*ಹುಡುಗಿಯರು ಹೇಗೆ ನಡೆದರೂ ಸೊಂಟ ಏಕೆ ಬಳುಕುತ್ತೆ?*



ಹಾಗೇನಿಲ್ಲ. ಪ್ರಮಾಣಬದ್ಧವಾಗಿಲ್ಲದಿದ್ದರೆ ಪ್ರಮಾಣವಾಗಿಯೂ ಬಳುಕಲ್ಲ!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ಕನ್ನಡಿಗರು ಮಯೂರನಂತೆ ನಿರಂತರವಾಗಿ ಕನ್ನಡಕ್ಕೆ ಹೋರಾಡುತ್ತಿರಲೇಬೇಕೆ ರಾಂಜೀ?*
ಅಗತ್ಯವಿಲ್ಲ. ತಮ್ಮ ತಮ್ಮ ಮಕ್ಕಳಿಗೆ ಕನ್ನಡ ಕಲಿಸುವ ಏಕೈಕ ಕೆಲಸ ಮಾಡಿದರೆ ಸಾಕೇ ಸಾಕು.

ಕೆ.ಪಿ. ಸುಜ್ಞಾನಾಚಾರಿ, ಮಾಲೂರು
*ಬಹಳ ಹಿಂದೆ ದೇವಲೋಕದಿಂದ ದೇವಕನ್ಯೆಯರು ಭೂಲೋಕಕ್ಕೆ ಸಿಕ್ಕಾಪಟ್ಟೆ ಬಂದು ಹೋಗುತ್ತಿದ್ದರು. ಈಗೇಕೆ ಬರುತ್ತಿಲ್ಲ?*
ಈಗ ಅವರನ್ನು ಕ್ಯಾರೇ ಅನ್ನುವವರಿಲ್ಲ. ಅವರಿಗಿಂತ ಕಡಿಮೆ ಬಟ್ಟೆ, ಹೆಚ್ಚು ಮಾದಕತೆ ಇರುವವರು ಇಲ್ಲೇ ಇದ್ದಾರೆ!

ಎಚ್.ಆರ್. ದೇಸಾಯಿ, ರಾಯಚೂರು
*ಸಮುದ್ರದಲ್ಲಿ ಸಿಗುವ ಮುತ್ತಿಗೂ, ಪ್ರೇಯಸಿಯಿಂದ ಸಿಗುವ ಮುತ್ತಿಗೂ ಏನು ವ್ಯತ್ಯಾಸ?*
ಸಮುದ್ರದ ಮುತ್ತು ಮೆಚ್ಚಿ ಧರಿಸಿ ಮೆರೆಯಲು ಚೆನ್ನ, ಪ್ರೇಯಸಿಯ ಮುತ್ತು ಮುಚ್ಚುಮರೆಯಲ್ಲಿ ಚೆನ್ನ!

ಮಹೇಶ ಬ. ಕೊಟಗಿ, ಬೈಲಹೊಂಗಲ
*ಉಪ್ಪಿಗಿಂತ ರುಚಿ ಇಲ್ಲ; ತಾಯಿಗಿಂತ ಬಂಧುವಿಲ್ಲ; ತಂದೆಗಿಂತ?*
ಎಟಿಎಂ ಇಲ್ಲ!

ಪುಷ್ಪಾ ಮ. ಶಾಂತಯ್ಯ, ಬಂದರವಾಡ
*ಪ್ರಾಮಾಣಿಕತೆಗೂ, ಮಾನವೀಯತೆಗೂ ಇರುವ ವ್ಯತ್ಯಾಸವೇನು?*
ಪ್ರಾಮಾಣಿಕತೆ ನ್ಯಾಯ ಕೊಡುತ್ತದೆ. ಮಾನವೀಯತೆ ಜೀವ ಕೊಡುತ್ತದೆ!

ಅಮರಯ್ಯ ಪತ್ರಿಮಠ, ಶೋರಾಪೂರ
*ಬಹುಮಾನ ಪಡೆಯಲು ಎಷ್ಟು ವರ್ಷ ತಪಸ್ಸು ಮಾಡಬೇಕು ಶಿವ?*
ಅಂತಹ ಪ್ರಶ್ನೆ ಹೊಳೆಯುವಷ್ಟು ವರ್ಷ!

ಕುಮಾರ ಚಲವಾದಿ, ಹೊಳೆನರಸಿಪುರ
*ನನ್ನ ಹೈಸ್ಕೂಲ್ ಗೆಳತಿಯರ ಹೆಸರೇ ನೆನಪಾಗುತ್ತಿಲ್ಲವಲ್ಲ, ಏಕೆ?*
ಕಾಲೇಜು ಗೆಳತಿಯರ ಗುಂಗು ಅವನ್ನು ಓವರ್‌ಟೇಕ್ ಮಾಡಿರುವುದರಿಂದ!

ಪಿ.ಜೆ. ರಾಘವೇಂದ್ರ, ಮೈಸೂರು
*ರಾಷ್ಟ್ರಪತಿ ಪ್ರಥಮ ಪ್ರಜೆಯಾದರೆ ಅಂತಿಮ ಪ್ರಜೆ ಯಾರು?*
ಇನ್ನೂ ಆಧಾರ್ ಕಾರ್ಡ್ ಮಾಡಿಸಿರದ ಆಗತಾನೇ ಹುಟ್ಟಿದ ಕೂಸು!

ಜೆ.ಆರ್.ಆದಿನಾರಾಯಣಮುನಿ, ಬೆಂಗಳೂರು
*ಕೇವಲ ಮಾತುಗಳಿಂದ ಬದುಕನ್ನು ಕಟ್ಟುವಂತಿದ್ದರೆ...?*
ಅವರನ್ನು ಮಾಸ್ಟರ್ ಹಿರಣ್ಣಯ್ಯ ಎಂದು ಕರೆಯುತ್ತಾರೆ!

## ಬಹುಮಾನಿತ ಪ್ರಶ್ನೆ

ಹೆಚ್.ಎಂ. ಅನಂತಪದ್ಮನಾಭ, ಮೈಸೂರು
*ನೀರು ಮೇಲ್ಮುಖವಾಗಿ ಹರಿಯುವುದು, ಅಗ್ನಿ ಕೆಳಮುಖವಾಗಿ ಉರಿಯುವಂತಿದ್ದರೆ ಜಗತ್ತು ಹೇಗಿರುತ್ತಿತ್ತು?*
ಉಗಿಯುವವರು ಆಕಾಶಕ್ಕೆ ಉಗಿಯಬಹುದಾದ್ದರಿಂದ ಭೂಮಿ ಕ್ಲೀನಾಗಿರುತ್ತಿತ್ತು. ಉರಿ ಕೆಳಕ್ಕೆ ಬರುವುದರಿಂದ ತೆರೆದ ಬಾಂಡ್ಲಿಗಳಲ್ಲಿ ಬೋಂಡ ವಡೆ ಕರಿಯುವುದು ಅಸಾಧ್ಯವಾಗುತ್ತಿತ್ತು.

ಸೃಜನ ಜೈನ್, ಹೂವಿನಹಡಗಲಿ
*'ನೀವು ಕೇಳಿದಿರಿ?'ಯ ಉತ್ತರ ಅಮೆರಿಕನ್ ಕರೆನ್ಸಿಗೆ ಸಮವೆ?*
ಅದನ್ನೂ ಮೀರಿದ್ದು. ಇಲ್ಲಿ ಮೌಲ್ಯ ಏರುಪೇರಾಗುವಂತೆಯೇ ಇಲ್ಲ!

ಸಿಹಿಮೊಗೆ ರಮೇಶ್, ಮೈಸೂರು
*ಅಂದಿನ ರಾಮಾಯಣದ ಆಂಜನೇಯನಿಗೂ ಕಲಿಯುಗದ ಆಂಜನೇಯನಿಗೂ ಏನು ವ್ಯತ್ಯಾಸ?*
ಅವನದ ಮರ್ಕಟ ದೇಹ, ಇವರದು ಮರ್ಕಟಬುದ್ಧಿ!

ಆರಿಫ್, ದಾವಣಗೆರೆ
*ಹಾರೋ ಹಕ್ಕಿಗಳ ತರಹ ಮನುಷ್ಯರಿಗೂ ರೆಕ್ಕೆಗಳಿದ್ದಿದ್ದರೆ?*



ಕೋಪ ಬಂದಾಗ ಇನ್ನೆಷ್ಟು ಹಾರಾಡುತ್ತಿದ್ದರೋ ಏನೋ.....!

ಆರ್.ರಾಮಸ್ವಾಮಿ ಅಯ್ಯಂಗಾರ್, ಕೆಂಗೇರಿ
*ಮುಸ್ಲಿಂ ಬಾಂಧವರು, ಕ್ರೈಸ್ತ ಬಾಂಧವರು, ಹಿಂದೂ....?*
ಅವರಿಬ್ಬರೂ ಬಾಂಧವರಾಗುವುದಕ್ಕೆ ಬೇಕಾದ ಬಂಧುಗಳು!

ಪಾಲ್ ಎಸ್. ಗೊನ್ಸಾಲ್ವಿಸ್, ಬಾಂದೇನಹಳ್ಳಿ
*ಇಂದು ಶಾಂತಿ ದುಬಾರಿಯಾದ ವಸ್ತುವಾಗಿದೆ. ಕಾರಣವೇನು?*
ಡಿಮ್ಯಾಂಡ್ ಜಾಸ್ತಿ, ಸಪ್ಲೈ ಕಡಿಮೆ ಇರುವುದರಿಂದ!

■ ರಾಮ್